ಶ್ರೀ ಕಡಿದಾಳ್ ಮಂಜಪ್ಪನವರು.—ಸೀನಿಯರ್ ಸರ್ಜನರ ಆಫೀಸಿನಲ್ಲಿ ಎಸ್ಟಾಬ್ಲಿಷ್‌ಮೆಂಟ್ ಕ್ಲಾರ್ಕು ಅದೇ ಜಾಗದಲ್ಲಿ ಎಷ್ಟು ವರ್ಷಗಳಿಂದ ಇದ್ದಾರೆ ?

Mr. SPEAKER.—That question does not arise.

Abolishing Medical School

*Q. –120. **Sri Kadidal MANJAPPA.**– (Shimoga District–General).—

Will the Government be pleased to state :—

(a) whether they intend abolishing the Medical School ;

(b) if so, whether they are intending to convert it into a Medical College ?

A.—**Sri T. SIDDALINGIAH** (Minister for Education and Public Health).—

(a) and (b) The matter is under consideration of the Government.

ಶ್ರೀ ಕಡಿದಾಳ್ ಮಂಜಪ್ಪನವರು.—ಮೆಡಿಕಲ್ ಸ್ಕೂಲನ್ನು ಮೆಡಿಕಲ್ ಕಾಲೇಜ್ ಆಗಿ ಪರಿವರ್ತಿಸುವುದಕ್ಕೆ ಏನೇನು ಅವಕಾಶಗಳಿವೆ ಎಂಬುದನ್ನು ತಾವು ಪರಿಶೀಲಿಸಿದ್ದೀರಾ ?

*ಶ್ರೀ ಟಿ. ಸಿದ್ದಲಿಂಗಯ್ಯನವರು —ಪರಿಗಣಿಸುತ್ತಾ ಇದ್ದೇವೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಮೊದಲು ಎಲ್ಲವನ್ನೂ ಆರೋಚನೆ ಮಾಡಿ ಒಂದು ನಿರ್ಧಾರಕ್ಕೆ ಬಂದ ಮೇಲೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಯೋಚನೆಮಾಡುತ್ತೇವೆ.

Janab MOHAMED VALIULLA (Kolar –Muslim).— How long is the subject under consideration ?

Sri T. SIDDALINGIAH.—Notice.

Janab MOHAMED VALIULLA.— Have any definite proposals been brought to the notice of the Government ?

Sri T. SIDDALINGIAH.—Yes.

Janab MOHAMED VALIULLA.— May I know what should be the strength of the Medical College ?

Sri T. SIDDALINGIAH.—It is not a permanent fixture.

Janab MOHAMED VALIULLA.—Do not the Government want to establish a Medical College ? For, I have not been able to make out what it is when it is said that it is not a permanent fixture. Supposing the Government want to start a Medical College, may I know what should be its strength ?

Mr. SPEAKER.—When the Government say that they have not considered the proposal, how can the Hon'ble Member ask this question ?

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಬಹಳ ಜನ ವಿದ್ಯಾರ್ಥಿಗಳಿಗೆ ಸೀಟು ಸಿಕ್ಕದೇ ವ್ಯಾನಂಗ ಮಾಡುವುದಕ್ಕೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಂದಿದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು ರಿಟ್ರಾಸೀಡೆಡ್ ಪ್ರದೇಶ).—ಈ ಸ್ಕೂಲು ಮತ್ತು ಕಾಲೇಜುಗಳಲ್ಲಿ ಸೀಟುಗಳನ್ನು ಕೊಡುವಾಗ ಮೆರಿಟ್ ಮೇಲೆ ಕೊಡುತ್ತೀರಾ ?

Mr. SPEAKER.—That supplementary does not arise. Next question. Sri H. C. Linga Reddy.

Extension of Road Transport Service throughout the State.

*Q.—6. **Sri H. C. LINGA REDDY** (Kolar District—General).—

Will the Government be pleased to state :—

(*a*) when the Road Transport Service was introduced in the State of Mysore by the Government ;

(*b*) whether they intend extending the Road Transport Service throughout the State ; if so, when ?

A.—**Sri H. SIDDAIYA** (Minister for Revenue and Excise).—

(*a*) Twelth September 1948.

(*b*) Yes. In due course by stages.

Sri H. C. LINGA REDDY.—How many buses are being run by Government ?

***Sri H. SIDDAIYA.**—One hundred and fifty.

Sri H. C. LINGA REDDY.—After the introduction of the Service, how many buses have been condemned ?

Sri H. SIDDAIYA.—I want notice.

Sri H. C. LINGA REDDY.—At any rate, are there condemned buses now ?

Sri H. SIDDAIYA.—I want notice.

Sri H. C. LINGA REDDY.—Is any arrangement made for the repair of these condemned buses or for auction of the same ?

Sri H. SIDDAIYA.—No necessity to order auction has arisen so far. There are some buses which are out of order and which require repairs. That is all I can say.

Sri H. C. LINGA REDDY.—While running when they stop in the middle of a route, has any arrangement been made for immediate transport of passengers?

Sri H. SIDDAIYA.—Yes, it is made.

Sri H. C. LINGA REDDY.—What is the arrangement made?

Sri H. SIDDAIYA.—Relief bus will be sent to the spot immediately to give relief to the passengers.

Sri H. C. LINGA REDDY.—Has it come to the notice of the Department that these buses are stranded on the way for hours together and the passengers are put to very serious trouble and difficulties?

Sri H. SIDDAIYA.—It rarely happens.

Sri H. C. LINGA REDDY.—Are there workshops in the district headquarters for the repair of these buses?

Sri H. SIDDAIYA.—Not in the district headquarters as yet.

Sri H. C. LINGA REDDY.—Have the Government thought of appointing an advisory committee to bring to the notice of Government the grievances and difficulties of the travelling public?

Sri H. SIDDAIYA.—It is under active consideration. It is very likely that a committee will be appointed early.

Sri H. C. LINGA REDDY.—May I know how long it will take to extend the scheme to other parts?

Sri H. SIDDAIYA.—It will take considerable time.

Janab MOHAMED VALIULLA (Kolar —Muslim).—The Hon'ble Minister said that 150 buses are running; may I know whether all the 150 buses run from and to Bangalore?

Sri H. SIDDAIYA.—On 172 routes these buses are put.

Janab MOHAMED VALIULLA.—Hitherto Government have got a system of running buses to or from Bangalore. But what about Shimoga and Mysore?

Sri H. SIDDAIYA.—The Hon'ble Member can find the answer in the next question. The second stage is under contemplation.

Janab MOHAMED VALIULLA.—So Government are running buses by virtue of the policy of the first stage?

Sri H. SIDDAIYA.—Yes.

Janab MOHAMED VALIULLA.—Therefore all the Government buses run from Bangalore?

Sri H. SIDDAIYA.—Bangalore and some parts of Mysore.

Janab MOHAMED VALIULLA.—So Government have started a part of the second stage?

Sri H. SIDDAIYA.—Yes.

Janab MOHAMED VALIULLA.—May I know the number of buses required?

Mr. SPEAKER.—The Hon'ble Member can put that supplementary on the next question.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಕೆಲವು ತಿಂಗಳುಗಳಿಂದ ಬಸ್ಸುಗಳಲ್ಲಿ ಜನರು ಓಡಾಡುವುದು ಕಡಿಮೆಯಾಗಿದೆಯೇ?

ಶ್ರೀ ಎಚ್. ಸಿದ್ದಯ್ಯನವರು.—ಆಷಾಢ ಮಾಸದಲ್ಲಿ ಸ್ವಲ್ಪ ಕಡಿಮೆಯಾಗಿದೆಯೆಂದು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಸ್. ಕರಿಯಪ್ಪನವರು.—ಆಷಾಢ ಮಾಸ ಅಷ್ಟೇ ಅಲ್ಲ, ದರ ಜಾಸ್ತಿ ಆಗಿರುವುದರಿಂದ ಕಡಿಮೆಯಾಗಿದೆ ಎಂಬುದು ಗೊತ್ತೆ?

ಶ್ರೀ ಎಚ್. ಸಿದ್ದಯ್ಯನವರು.—ದರ ಜಾಸ್ತಿ ಮಾಡಿರುವುದು ಗೊತ್ತಿದೆ. ಆದರೆ ಅದರಿಂದ ಪಾಯಿದೆಯೂ ಹೆಚ್ಚಾಗಿದೆ.

ಶ್ರೀ ಎಸ್. ಕರಿಯಪ್ಪನವರು.—ಕೆಲವು ವೇಳೆ ಹಾಗೆ ಕಡಿಮೆ ಮಾಡುವುದಕ್ಕೆ ಕಾರಣ ಸರ್ಕಾರಿ ಬಸ್ಸುಗಳು ಓಡುವದಕ್ಕಿಂತ ಮುಂಚೆ ಪ್ರೈವೇಟ್ ಬಸ್ಸುಗಳು ಓಡಾಡುವುದಕ್ಕೆ ಪರ್ಮಿಟ್ ಕೊಟ್ಟಿದ್ದರಿಂದ ಎಂದು ಗೊತ್ತೆ?

ಶ್ರೀ ಎಚ್. ಸಿದ್ದಯ್ಯನವರು.—ಕಡಿಮೆಯಾಗಿದೆ ಎಂದು ಆಗಲೇ ಒಪ್ಪಿಕೊಂಡಿದ್ದೇವೆ.

ಶ್ರೀ ಎಸ್. ಕರಿಯಪ್ಪನವರು.—ಈಗ ಅನೇಕ ಕಡೆ ಸರ್ಕಾರಿ ಬಸ್ಸುಗಳು ಓಡಾಡುವುದಕ್ಕೆ ಮುಂಚೆ ಪ್ರೈವೇಟ್ ಬಸ್ಸುಗಳು ಓಡಾಡುತ್ತವೆ ಎಂಬುದು ಗೊತ್ತೆ?

ಶ್ರೀ ಎಚ್. ಸಿದ್ದಯ್ಯನವರು.—4-5 ಕಡೆ ಇನ್ನೂ ಆ ರೀತಿ ಇದೆ, ಅದನ್ನು ಸರಿಪಡಿಸಲಾಗುತ್ತದೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ನ ಪಂಗಡ).—12ನೇ ಸೆಪ್ಟೆಂಬರ್ 1948ರಲ್ಲಿ ಎಷ್ಟು ಬಸ್ಸುಗಳನ್ನು ಓಡಿಸಿದ್ದೀರಿ?

Sri H. SIDDAIYA.—I want notice.

ಶ್ರೀ ಟಿ. ಹನುಮಯ್ಯನವರು.—ಆಗ ಪ್ರತಿ ದಿನದ ವರಮಾನ ಎಷ್ಟು ಬರುತ್ತಾ ಇತ್ತು?

ಶ್ರೀ ಎಚ್. ಸಿದ್ದಯ್ಯನವರು.—ಪ್ರತಿ ದಿನದ್ದೂ ಹೇಳಬೇಕೆಂದರೆ ನೋಟೀಸ್ ಬೇಕು. ಮತ್ತು ಆಫೀಸಿನಲ್ಲಿರುವ ರಿಕಾರ್ಡುಗಳನ್ನೆಲ್ಲಾ ನೋಡಬೇಕಾಗುತ್ತದೆ. ಆರು ತಿಂಗಳು ಅಥವಾ ಮೂರು ತಿಂಗಳ ಅಂಕಿ ಅಂಶ ಕೇಳಿದರೆ ಹೇಳಬಹುದು.

ಶ್ರೀ ಟಿ. ಹನುಮಯ್ಯನವರು.—ಪ್ರತಿ ದಿನದ ಸರಾಸರಿ ವರಮಾನ ನಾನು ಕೇಳುತ್ತಿದ್ದೇನೆ.

ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಟಿ. ಹನುಮಯ್ಯನವರು.—ಈಗ ಓಡುತ್ತಿರುವ 150 ಬಸ್ಸುಗಳ ಪ್ರತಿದಿನದ ಸರಾಸರಿ ವರಮಾನ ಎಷ್ಟು?

ಶ್ರೀ ಎಚ್. ಸಿದ್ದಯ್ಯನವರು:—6 ತಿಂಗಳ ಅಥವಾ ಒಂದು ವರ್ಷದ ಅಂಕಿ ಅಂಶ ಹೇಳುತ್ತೇನೆ. ಅದರಿಂದ ಸರಾಸರಿ ಲೆಕ್ಕವನ್ನು ಕಂಡುಹಿಡಿದುಕೊಳ್ಳಬಹುದು. ಎಲ್ಲವನ್ನೂ ಹೇಳಬೇಕೆಂದರೆ ಕಾಲ ತೆಗೆದುಕೊಳ್ಳುತ್ತದೆ. 1948–49ರಲ್ಲಿ 2,61,214 ರೂಪಾಯಿಗಳ ನಿವ್ವಳ ಆದಾಯವೂ, 1949–50ರಲ್ಲಿ 1,74,548 ರೂಪಾಯಿಗಳ ನಿವ್ವಳ ಆದಾಯವೂ ಬಂದಿದೆ.

ಅಧ್ಯಕ್ಷರು.—ಅವರು ಕೇಳುತ್ತಿರುವುದು ಪ್ರತಿದಿನದ ಸರಾಸರಿ ವರಮಾನ, ನಿವ್ವಳ ನಿವ್ವಳ ಆದಾಯ ಬಂದಿರುವುದು ಹೇಳಿದರೆ ಸರಿಹೋಗುವುದಿಲ್ಲ.

ಶ್ರೀ ಟಿ. ಹನುಮಯ್ಯನವರು.—ಈಗ 150 ಬಸ್ಸುಗಳಿದ್ದರೂ ಹಿಂದೆ ಪ್ರಾರಂಭ ಮಾಡಿದಾಗ ಎಷ್ಟು ಆದಾಯ ಬರುತ್ತಿತ್ತೋ ಅದಕ್ಕಿಂತ ಕಮ್ಮಿಯಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಟಿ. ಹನುಮಯ್ಯನವರು.—ಬಸ್ಸುಗಳ ಹಣ ಪೋಲಾಗುತ್ತದೆ, ಈವರೆಗೂ 2 ಸಾವಿರ ರೂಪಾಯಿಗಳವರೆಗೆ ಪೋಲಾಗಿದೆ ಎಂಬುದು ಗೊತ್ತೇ?

ಶ್ರೀ ಎಚ್. ಸಿದ್ದಯ್ಯನವರು.—ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಹನುಮಯ್ಯನವರು.—ಪೋಲಾಗದಂತೆ ನೋಡಿಕೊಳ್ಳಲು ಏನು ವ್ಯವಸ್ಥೆ ಮಾಡಿದ್ದೀರಿ?

ಶ್ರೀ ಎಚ್. ಸಿದ್ದಯ್ಯನವರು.—ಪೋಲಾಗುತ್ತದೆ ಎಂಬುದನ್ನು ನಾನು ಒಪ್ಪಿಕೊಳ್ಳುವುದಿಲ್ಲ.

Sri H. M. CHANNABASAPPA (Mysore District—General).—May I know the total investment made so far?

Sri H. SIDDAIYA.—Rs. 21,72,772-14-7.

Sri H. M. CHANNABASAPPA.—Are the results of these two years encouraging?

Sri H. SIDDAIYA.—Very encouraging.

Sri H. M. CHANNABASAPPA.—When the entire transport system is going to be nationalised, then, what becomes of the present bus owners?

Sri H. SIDDAIYA.—That is a separate issue.

Sri A. BHEEMAPPA NAIK (Chitaldrug District—General).—May I know the average running expense and income per mile?

Sri H. SIDDAIYA.—I want notice.

Sri A. BHEEMAPPA NAIK.—Have the Government compared that with the expense incurred by the Bangalore Transport Company?

Sri H. SIDDAIYA.—We have compared; but at present I am not in a position to give information.

Sri A. BHEEMAPPA NAIK.—Is it worse or is it better?

Sri H. SIDDAIYA.—I must verify it and then answer.

Sri A. BHEEMAPPA NAIK.—Shall I take it that so far the Government have not verified it?

Sri H. SIDDAIYA.—I do not exactly remember because that question is not here.

Sri A. BHEEMAPPA NAIK.—Will the Government take the monthly running income and expenditure and compare it and place it before the House at least before the close of this session?

Sri H. SIDDAIYA.—I shall try to.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಬಸ್ಸುಗಳನ್ನು ಓಡಿಸುವುದಕ್ಕೆ ತಕ್ಕಷ್ಟು ಜನ ಡ್ರೈವರುಗಳು ಮತ್ತು ಕಂಡಕ್ಟರುಗಳು ಇಲ್ಲ ಎನ್ನುವುದು ನಿಜವೇ?

ಶ್ರೀ ಎಚ್. ಸಿದ್ದಯ್ಯನವರು.—ನಿಜವಲ್ಲ.

ಶ್ರೀ ಟಿ. ಮಾದಯ್ಯಗೌಡರು.—ಅನೇಕ ಸಂದರ್ಭಗಳಲ್ಲಿ ಹೊರಡತಕ್ಕ ಬಸ್ಸುಗಳು ಹೊತ್ತಾಗಿ ಹೊರಡುತ್ತವೆ ಎಂಬುದನ್ನು ತಾವು ಒಪ್ಪಿಕೊಳ್ಳುತ್ತೀರಾ?

ಶ್ರೀ ಎಚ್. ಸಿದ್ದಯ್ಯನವರು.—ಸಾಕಾದಷ್ಟು ಡ್ರೈವರುಗಳ ಸಂಖ್ಯೆ ಇದೆ.

ಶ್ರೀ ಟಿ. ಮಾದಯ್ಯಗೌಡರು.—ಕಂಡಕ್ಟರುಗಳು ಸಾಕಾದಷ್ಟು ಮಂದಿ ಇದ್ದಾರೆಯೇ?

ಶ್ರೀ ಎಚ್. ಸಿದ್ದಯ್ಯನವರು.—ಇದ್ದಾರೆ.

ಶ್ರೀ ಟಿ. ಮಾದಯ್ಯಗೌಡರು.—ಕೇಂದ್ರದಲ್ಲಿ ಯುಕ್ತವಾಗಿ ಇರಬೇಕಾದಷ್ಟು ಉತ್ತಮ ರೀತಿಯ ವರ್ಕ್‌ಷಾಪ್ ಏರ್ಪಾಡಾಗಿಲ್ಲವೆಂಬುದೂ, ಅದಕ್ಕೆ ಬೇಕಾದ ಸಲಕರಣೆ ಇನ್ನೂ ಒದಗಿಲ್ಲವೆಂಬುದೂ ನಿಜವೇ?

ಶ್ರೀ ಎಚ್. ಸಿದ್ದಯ್ಯನವರು.—ಇನ್ನೂ ಅಷ್ಟು ತೃಪ್ತಿಕರವಾಗಿ ಆಗಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕು. ವರ್ಕ್‌ಷಾಪ್ ಈಗ ತಾನೆ ಮುಗಿಯುವುದರಲ್ಲಿದೆ.

ಶ್ರೀ ಟಿ. ಮಾದಯ್ಯಗೌಡರು.—ಈ ಬಸ್ಸುಗಳಿಗೆ ಸಾಕಾದಷ್ಟು ಬಿಡಿ ಭಾಗಗಳನ್ನು ಒದಗಿಸಿಕೊಟ್ಟಿಲ್ಲದಿರುವುದರಿಂದ ಅನೇಕ ಸಾರಿ ಬಸ್ಸುಗಳು ಓಡಾಡುವುದಕ್ಕೆ ಆಡಚಣೆಯಾಗಿರುವುದು ನಿಜವೇ?

ಶ್ರೀ ಎಚ್. ಸಿದ್ದಯ್ಯನವರು.—ನಿಜ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಪ್ರತಿಯೊಂದು ಬಸ್ಸಿಗೂ ಹೊರಡುವಾಗ ಜೊತೆಗೆ toolsನ್ನೂ ಕಳುಹಿಸಿಕೊಡಲಾಗುತ್ತದೆಯೇ?

ಶ್ರೀ ಎಚ್. ಸಿದ್ದಯ್ಯನವರು.—ಕಳುಹಿಸಿಕೊಡುತ್ತೇವೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಅನೇಕ ಸಾರಿ ಬಸ್ಸುಗಳು ನಿಂತರೆ tools ಇಲ್ಲದೆ ಹೋಗಿ ಮೈಸೂರಿಗೆ ಅಥವಾ ಬೆಂಗಳೂರಿಗೆ 40-50 ಮೈಲಿ ದೂರ ಹಿಂದಕ್ಕೆ ಬಂದು ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಕಾಲದ ಹಿಂದೆ ಹಾಗಾಗುತ್ತಿತ್ತು.

ಶ್ರೀ ಕೆ. ಪುಟ್ಟಸ್ವಾಮಿಯವರು.—ಹಾಗಾಗುತ್ತಿದ್ದುದಕ್ಕೆ ಕಾರಣವೇನು?

ಶ್ರೀ ಎಚ್. ಸಿದ್ದಯ್ಯನವರು.—ಇನ್ನೂ ಹೊಸದಾಗಿ ಪ್ರಾರಂಭವಾಗಿತ್ತು; ಕೆಲವು ಸಾಮಾನುಗಳು ಇನ್ನೂ ಬಂದಿರಲಿಲ್ಲ. ಆದಕಾರಣ ಹಾಗಾಗಿರಬಹುದು.

ಶ್ರೀ ಕೆ. ಪುಟ್ಟಸ್ವಾಮಿಯವರು.—ಪ್ರತಿಯೊಂದು ಬಸ್ಸಿಗೂ ಕೊಂಡುಕೊಳ್ಳುವಾಗಲೇ toolsನ್ನೂ ಕೊಡುವುದಿಲ್ಲವೇ ?

ಶ್ರೀ ಎಚ್. ಸಿದ್ದಯ್ಯನವರು.—ಕೊಡುತ್ತಾರೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಹಾಗಾದರೆ, ಆ tools ಎಲ್ಲವೂ ಏನಾಗಿತ್ತು ?

ಶ್ರೀ ಎಚ್. ಸಿದ್ದಯ್ಯನವರು.—ಎಲ್ಲಾ ಸಾಮಾನು ಗಳೂ ಪೂರ್ತಿಯಾಗಿ ಬಂದಿರಲಿಲ್ಲ. ಈಚೆಗೆ ಎಲ್ಲಾ ಸರಿ ಹೋಗಿದೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ನಾನು ಹೇಳುತ್ತಿರುವುದು tools ವಿಚಾರ, spare parts ವಿಚಾರ ಅಲ್ಲ. Tools ಬಂದಿರಲಿಲ್ಲವೇ ?

ಶ್ರೀ ಎಚ್. ಸಿದ್ದಯ್ಯನವರು.—Tools ವಿಚಾರವೇ ನಾನು ಹೇಳಿದ್ದು.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈ ಬಸ್ಸುಗಳಿಗೆ ಸಾಕಾದಷ್ಟು ಪೆಟ್ರೋಲನ್ನು ಕಳುಹಿಸಿ ಕೊಡುತ್ತಿದ್ದೀರಾ ?

ಶ್ರೀ ಎಚ್. ಸಿದ್ದಯ್ಯನವರು.—ಸರಿಯಾಗಿ ಆಳತೆ ಮಾಡಿ ಎಷ್ಟು ಅವಶ್ಯಕವೋ ಅಷ್ಟು ಮಾತ್ರ ಕೊಡುತ್ತಿದ್ದೇವೆ. ಇದರಿಂದ ಸ್ವಲ್ಪ ಉಳಿತಾಯವಾಯಿತು. ಆದರೆ ಇದರಿಂದ ಒಂದೊಂದು ವೇಳೆ ಎರಡು ಮೂರು ಮೈಲ್‌ಗಳ ಹಿಂದೆ ನಿಂತು ಹೋಗುತ್ತವೆಂದು ತಿಳಿದು ಬಂದಿದೆ. ಅದನ್ನು ಸರಿಪಡಿಸಿಕೊಳ್ಳುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಬಸ್ಸುಗಳು ಹೀಗೆ ನಿಂತುಹೋಗಿರುವುದು ಒಂದೊಂದು ದಿವಸ ಅಲ್ಲ. ಪ್ರತಿ ದಿವಸವೂ ಹೀಗೆಯೇ ಆಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ.

Mr. SPEAKER.—Next Question, Sri G. Narayana Gowda.

Mysore Road Transport Scheme.

Q.*—40. **Sri G. NARAYANA GOWDA. (Kolar District—General).—

Will the Government be pleased to state :—

(*a*) when the Mysore Road Transport Scheme was introduced ;

(*b*) the first steps adopted by them in introducing the Road Transport Scheme ;

(*c*) the further steps they intend to take ?

A.—**Sri H. SIDDAIYA** (Minister for Revenue and Excise).—

(*a*) 12th September 1948.

(*b*) and (*c*) The scheme of Nationalisation of Road Transport Services undertaken by Government aims at monopolising all bus routes in the State by Government in as convenient a manner as possible, in three stages as indicated below :—

I Stage.—Taking over all bus routes diverging from and converging to Bangalore.

II Stage.—Taking over all bus routes round about Mysore.

III Stage.—Taking over all bus routes round about Shimoga.

The first stage of the scheme is being implemented and Government buses are plying on 172 routes. Further stages of the scheme will be taken up after the first stage is completed.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ಈ ರೋಡ್ ಟ್ರಾನ್ಸ್‌ಪೋರ್ಟ್ ವ್ಯವಸ್ಥೆಯೆಂಬುದು ರಾಷ್ಟ್ರೀಕರಣದ ಪ್ರಥಮ ಹೆಜ್ಜೆಯಲ್ಲವೇ ?

ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಜಿ. ನಾರಾಯಣಗೌಡರು.—ಪ್ರಥಮತಃ ಇದನ್ನು ಜಾರಿಗೆ ತರಬೇಕಾದರೆ ಬೆಂಗಳೂರಿನಿಂದ ಬೇರೆ ಊರುಗಳಿಗೂ ಮತ್ತು ಬೇರೆ ಊರುಗಳಿಂದ ಬೆಂಗಳೂರಿಗೂ ಬರುವ ಬಸ್ಸು ರೆಗ್ಯುಲೇಷನ್ಸ್ ರೋಡ್ ಟ್ರಾನ್ಸ್‌ಪೋರ್ಟ್‌ನವರು ತೆಗೆದುಕೊಳ್ಳಬೇಕೆಂದು ನಿಮ್ಮ ಉದ್ದೇಶವಲ್ಲವೇ ?

ಶ್ರೀ ಎಚ್. ಸಿದ್ದಯ್ಯನವರು.—ಅದೇ ಉದ್ದೇಶ.

ಶ್ರೀ ಜಿ. ನಾರಾಯಣಗೌಡರು.—ಆ ಮಾರ್ಗಗಳಲ್ಲಿ ಈಗ ಖಾಸಗಿಯವರ ಬಸ್ಸುಗಳಾವುವೂ ಓಡಾಡುತ್ತಿಲ್ಲವೆ ?

ಶ್ರೀ ಎಚ್. ಸಿದ್ದಯ್ಯನವರು.—ಓಡಾಡುತ್ತಿಲ್ಲ.

ಶ್ರೀ ಜಿ. ನಾರಾಯಣಗೌಡರು.—ಹೊಸದಾಗಿ ಯಾವುದಾದರೂ ಕೊಟ್ಟಿದ್ದೀರಾ ?

ಶ್ರೀ ಎಚ್. ಸಿದ್ದಯ್ಯನವರು.—ಯಾವುದೂ ಕೊಟ್ಟಿಲ್ಲ.

ಶ್ರೀ ಜಿ. ನಾರಾಯಣಗೌಡರು.—ಹಾಗೇನಾದರೂ ಕೊಟ್ಟಿದ್ದರೆ ಅವರ ಲೈಸೆನ್ಸ್ ವಜಾಮಾಡುತ್ತೀರಾ ?

ಶ್ರೀ ಎಚ್. ಸಿದ್ದಯ್ಯನವರು.—ಕೊಟ್ಟಿದ್ದು ಜ್ಞಾಪಕವಿಲ್ಲ. ಆ ರೀತಿಯಾಗಿ ಯಾವುದಾದರೂ ಇದ್ದರೆ ವಿದ್ಯಮಾನ ಪರಿಶೀಲಿಸಿ ನೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಜಿ. ನಾರಾಯಣಗೌಡರು.—ಈ ಮಾರ್ಗಗಳಲ್ಲಿ ಇನ್ನೂ ಪ್ರೈವೇಟ್ ಬಸ್ಸುಗಳಿರುವುದು ರೋಡ್ ಟ್ರಾನ್ಸ್‌ಪೋರ್ಟ್ ಸರ್ವಿಸ್ಸಿಗೆ ಧಕ್ಕೆಯಲ್ಲವೇ ?

ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಜಿ. ನಾರಾಯಣಗೌಡರು.—ಆದ್ದರಿಂದ ಈ ತಕ್ಷಣ ಪ್ರೈವೇಟ್ ಬಸ್ಸುಗಳನ್ನೆಲ್ಲಾ ಆ ಮಾರ್ಗಗಳಲ್ಲಿ ತೆಗೆಯುವುದಕ್ಕೆ ಯೋಚನೆಮಾಡುತ್ತೀರಾ ?

Mr. SPEAKER.—That is a suggestion the Hon'ble Member is making ; it is not information that he wants.

ಶ್ರೀ ಜಿ. ನಾರಾಯಣಗೌಡರು.—ಎಲ್ಲೆಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳೂ ಮತ್ತು ಪ್ರೈವೇಟ್ ಬಸ್ಸುಗಳೂ ಇವೆಯೋ, ಅಲ್ಲಿ ಈ ಸರ್ಕಾರಿ ಬಸ್ಸುಗಳವರು ಅವರಿಂದ ಲಂಚ ಹೊಡೆದು ತಾವು ನ್ಯಾಯವಾಗಿ